ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	495
ಸದಸ್ಯರ ಹೆಸರು	:	ಶ್ರೀ ಆರ್ ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	10.03.2020
ಉತ್ತರಿಸುವ ಸಚಿವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಮೈಸೂರು ಕಾಗದ ಕಾರ್ಖಾನೆಯನ್ನು ಮತ್ತೆ ಆರಂಭ ಮಾಡುವ ಬಗ್ಗೆ ಸರ್ಕಾರ ಯೋಚಿಸಿದೆಯೇ; ಅಥವಾ ಸರ್ಕಾರ ಈ ಕಾರ್ಖಾನೆಯನ್ನು ಆರಂಭ ಮಾಡದಿದ್ದಲ್ಲಿ ಖಾಸಗಿಯವರಿಗೆ ಗುತ್ತಿಗೆ ನೀಡುವ ಬಗ್ಗೆ ಅಥವಾ ಮಾರಾಟ ಮಾಡುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ:	ಮೈಸೂರು ಕಾಗದ ಕಾರ್ಖಾನೆಯನ್ನು ಮತ್ತೆ ಪ್ರಾರಂಭಿಸುವ ಯೋಚನೆ ಸರ್ಕಾರಕ್ಕೆ ಇರುವುದಿಲ್ಲ. ಕಾರ್ಖಾನೆಯ ಕಾರ್ಯಚಟುವಟಿಕೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡಲು ಸಚಿವ ಸಂಪುಟದ ನಿರ್ಣಯದನ್ವಯ ತೀರ್ಮಾನಿಸಲಾಗಿದೆ.
ಆ)	ಈ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರು ಸ್ವಯಂ ನಿವೃತ್ತಿ ಪಡೆದಿದ್ದಾರೆಯೇ; ಸ್ವಯಂ ನಿವೃತ್ತಿ ಪಡೆಯದೇ ಇರುವ ನೌಕರರ ಸಂಖ್ಯೆ ಎಷ್ಟು; ಇವರುಗಳಿಗೆ ಬೇರೆ ಇಲಾಖೆಗೆ ನಿಯೋಜನೆ ಮಾಡುವ ಉದ್ದೇಶವಿದೆಯೇ:	ಸರ್ಕಾರವು ಎಲ್ಲಾ ಖಾಯಂ ಉದ್ಯೋಗಿಗಳಿಗೆ ಸ್ವಯಂ ನಿವೃತ್ತಿ ಯೋಜನೆ ಹಾಗೂ ಎಲ್ಲಾ ಗುತ್ತಿಗೆ ಆಧಾರದ ಕಾರ್ಮಿಕರಿಗೆ ಸ್ವಯಂ ಪ್ರತ್ಯೇಕೀಕರಣ ಯೋಜನೆಯನ್ನು ಜಾರಿಗೊಳಿಸಲಾಗಿದೆ.
ಇ)	ನಿಯೋಜನೆ ಮಾಡುವ ಉದ್ದೇಶವಿದ್ದಲ್ಲಿ, ಬಾಕಿ ಉಳಿದಿರುವ ಕಾರ್ಮಿಕರನ್ನು ಯಾವಾಗ ನಿಯೋಜನೆ ಮೇಲೆ ಕಳುಹಿಸಲಾಗುವುದು: ಈ ನಿಯೋಜನೆಗೆ ತಾಂತ್ರಿಕವಾಗಿ ಇರುವ ತೊಂದರೆಗಳೇನು; (ಸಂಪೂರ್ಣ ವರದಿ ನೀಡುವುದು)	

ಕ್ರಸ	ವಿವರ	ಸಂಖ್ಯೆ
1	ವಿ.ಆರ್.ಎಸ್. ಪಡೆದಿರುವ ನೌಕರರ ಸಂಖ್ಯೆ	773
2	ವಿ.ಎಸ್.ಎಸ್ ಪಡೆದಿರುವ ನೌಕರರ ಸಂಖ್ಯೆ	1028
3	ವಿ.ಆರ್.ಎಸ್ ಪಡೆಯದೇ ಇರುವ ನೌಕರರ ಸಂಖ್ಯೆ	220

ಇದರಲ್ಲಿ 117/ ಉದ್ಯೋಗಿಗಳು / ಅಧಿಕಾರಿಗಳು ಸರ್ಕಾರದ ವಿವಿಧ ನಿಗಮ/ಮಂಡಳಗಳಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಕಾರ್ಮಿಕ ಇಲಾಖೆ, ಇವರ ಆದೇಶ ಸಂಖ್ಯೆ: ಕಾಇ 226 ಐ.ಡಿ.ಜಿ 2019 ದಿನಾಂಕ: 28.06.2019ರಲ್ಲಿ 1947ರ ಕೈಗಾರಿಕಾ ವಿವಾದ ಕಾಯ್ದೆ ಕಂ 25 (ಓ) (2) ರಡಿ ಕಾರ್ಖಾನೆಯನ್ನು ಮುಚ್ಚಲು ಅನುಮತಿ ನೀಡಿರುವುದರಿಂದ ಉದ್ಯೋಗಿಗಳಿಗೆ ನಿಯಮಾನುಸಾರ ಮುಚ್ಚುವ ಪರಿಹಾರ (Closure Compensation) ನೀಡಿ ಇವರ ಸೇವೆಯನ್ನು

		ಮುಕ್ತಾಯಗೊಳಿಸಬೇಕಾಗಿರುತ್ತದೆ. ಈ ಮಧ್ಯ ಮೇಲ್ಕಂಡ ಆದೇಶವನ್ನು ಪ್ರಶ್ನಿಸಿ ಕಾರ್ಖಾನೆಯ ಉದ್ಯೋಗಿಗಳ ಸಂಘವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ 30139/ 2019ರಲ್ಲಿ ದಾಖಲಿಸಿದ್ದು, ದಿನಾಂಕ: 20.08.2019 ರಂದು ಮಾನ್ಯ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯ ಸಂದರ್ಭದಲ್ಲಿ ವಿ.ಆರ್.ಎಸ್ ಪಡೆಯದಿರುವ ಉದ್ಯೋಗಿಗಳನ್ನು ನಿಯೋಜನೆ ಮೇಲೆ ಕಳುಹಿಸಲು ವ್ಯವಸ್ಥೆ ಮಾಡುವಂತೆ ಪ್ರತಿವಾದಿಗಳಾದ ಕಾರ್ಮಿಕ ಇಲಾಖೆಗೆ ನೀಡಿರುವ ನಿರ್ದೇಶನದ ಹಿನ್ನೆಲೆಯಲ್ಲಿ ಎಂ.ಪಿ.ಎಂ ಸಂಸ್ಥೆಯಿಂದ ಉದ್ಯೋಗಿಗಳನ್ನು ನಿಯೋಜನೆ ಮೇಲೆ ಪಡೆಯುವಂತೆ ಎಲ್ಲಾ ನಿಗಮ/ಮಂಡಳಿಗಳಿಗೆ ದಿ: 20.09.2019ರಂದು ಪತ್ರ ಹೊರಡಿಸಲಾಗಿದೆ. ನಿಗಮ/ಮಂಡಳಿಗಳಿಂದ ನಿಯೋಜನೆಯ ಮಾಹಿತಿ ನಿರೀಕ್ಷಿಸಲಾಗಿದೆ. ಪ್ರಕರಣವು ದಿನಾಂಕ: 20.12.2019 ಹಾಗೂ 09.01.2020ರಂದು ವಿಚಾರಣೆಗೆ ಬಂದಿದ್ದು, ವಿಚಾರಣೆಯ ನಂತರ ಮಾನ್ಯ ಉಚ್ಚ ನ್ಯಾಯಾಲಯವು ಪ್ರತಿವಾದಿಗಳಾದ ಕಾರ್ಮಿಕ ಇಲಾಖೆಯು ದಿನಾಂಕ: 28.06.2019ರಂದು ಹೊರಡಿಸಿರುವ ಆದೇಶವನ್ನು ತಳ್ಳಿ ಹಾಕಿ ಪುನಃ ಮರು ವಿಚಾರಣೆ ನಡೆಸಿ, ಸಕಾರಣಗಳೊಂದಿಗೆ ಆದೇಶದ ಪ್ರಮಾಣ ಪತ್ರ ಸ್ವೀಕರಿಸಿದ 4 ವಾರದೊಳಗೆ ಆದೇಶ ಹೊರಡಿಸುವಂತೆ ಆದೇಶಿಸಿದೆ. ಸದರಿ ಆದೇಶದನ್ವಯ ಕಾರ್ಮಿಕ ಇಲಾಖೆಯು ವಿಚಾರಣೆ ನಡೆಸುತ್ತಿದೆ.

ಸಿಐ 19 ಸಿಪಿಎಂ 2020 (ಇ)

(ಜಗದೀಶ ಶೆಟ್ಟರ),
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು